ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue- 4, September - October 2026, Pp. 158-164
Bi-Monthly, Peer-Reviewed, Open Access, Indexed Journal

I S S N: 2583-3510

SIRDF JOURNALS
editor@srujani.in
www.srujani.in

ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದ ವಚನ ಸಂಪುಟಗಳು: ಒಂದು ವಿವೇಚನೆ

ಬಸವರಾಜ ಡಿ[1] ಮತ್ತು ಪ್ರೊ. ಎಸ್. ಎಂ. ಗಂಗಾಧರಯ್ಯ[2]
[1]ಸಂಶೋಧನಾ ವಿದ್ಯಾರ್ಥಿ, [2]ಹಿರಿಯ ಪ್ರಾಧ್ಯಾಪಕರು
ಕಿತ್ತೂರು ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ವಿದ್ಯಾಸಂಗಮ, ಬೆಳಗಾವಿ

Abstract:

ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದಲ್ಲಿ ಪ್ರಕಟಗೊಂಡ ವಚನ ಸಂಪುಟಗಳ ಸಂಪಾದನಾ ವಿಧಾನ, ವೈಶಿಷ್ಟ್ಯಗಳು ಮತ್ತು ಕನ್ನಡ ವಚನ ಸಾಹಿತ್ಯಕ್ಕೆ ನೀಡಿದ ಕೊಡುಗೆಯನ್ನು ಈ ಸಂಶೋಧನಾ ಲೇಖನವು ವಿಶ್ಲೇಷಿಸುತ್ತದೆ. ವಚನ ಸಾಹಿತ್ಯದ ಸಂಗ್ರಹ, ಸಂಕಲನ, ಸಂಪಾದನೆ ಹಾಗೂ ಪಾಠಪರಿಷ್ಕರಣ ಕಾರ್ಯಗಳಲ್ಲಿ ಕಲಬುರ್ಗಿಯವರು ಅನುಸರಿಸಿದ ವೈಜ್ಞಾನಿಕ ಮತ್ತು ವೈಧಾನಿಕ ವಿಧಾನಗಳನ್ನು ಇಲ್ಲಿ ಚರ್ಚಿಸಲಾಗಿದೆ. ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ, ಸಿದ್ಧರಾಮೇಶ್ವರ ಹಾಗೂ ಶಿವಶರಣೆಯರ ವಚನ ಸಂಪುಟಗಳ ಪರಿಷ್ಕರಣೆ, ಪಾಠದೋಷಗಳ ನಿವಾರಣೆ ಮತ್ತು ಹೊಸ ವಚನಗಳ ಶೋಧನೆಯ ಮಹತ್ವವನ್ನು ಲೇಖನವು ಗುರುತಿಸುತ್ತದೆ. ಹಸ್ತಪ್ರತಿಗಳ ಪರಿಶೀಲನೆ, ಪಾಠಾಂತರಗಳ ವಿಶ್ಲೇಷಣೆ, ಪುನರುಕ್ತಿಗಳ ನಿವಾರಣೆ ಹಾಗೂ ವಚನಗಳ ಕ್ರಮಬದ್ಧ ಸಂಯೋಜನೆಯ ಮೂಲಕ ವಚನ ಸಾಹಿತ್ಯದ ವಿಶ್ವಾಸಾರ್ಹತೆಯನ್ನು ಹೆಚ್ಚಿಸಿದ ಅವರ ಕಾರ್ಯವನ್ನು ಇಲ್ಲಿ ಮೌಲ್ಯಮಾಪನ ಮಾಡಲಾಗಿದೆ. ಒಟ್ಟಾರೆಯಾಗಿ, ಡಾ. ಎಂ. ಎಂ. ಕಲಬುರ್ಗಿ ಅವರ ಸಂಪಾದನಾ ಕಾರ್ಯವು ವಚನ ಸಾಹಿತ್ಯದ ಸಂರಕ್ಷಣೆ, ವೈಜ್ಞಾನಿಕ ಅಧ್ಯಯನ ಮತ್ತು ಮುಂದಿನ ಸಂಶೋಧನೆಗೆ ಮಹತ್ವದ ಆಧಾರವನ್ನು ಒದಗಿಸಿದೆ ಎಂಬುದನ್ನು ಈ ಲೇಖನವು ಪ್ರತಿಪಾದಿಸುತ್ತದೆ.

Keywords: *ಡಾ. ಎಂ. ಎಂ. ಕಲಬುರ್ಗಿ, ವಚನ ಸಾಹಿತ್ಯ, ಗ್ರಂಥ ಸಂಪಾದನೆ, ಪಾಠಪರಿಷ್ಕರಣ, ವಚನ ಸಂಪುಟಗಳು.*

ಪೀಠಿಕೆ

ಕನ್ನಡ ಸಾಹಿತ್ಯ ವಿಶ್ವ ಸಾಹಿತ್ಯಕ್ಕೆ ನೀಡಿದ ಮಹತ್ವದ ಕೊಡುಗೆಗಳಲ್ಲಿ ವಚನ ಸಾಹಿತ್ಯವು ಒಂದು. ಆ ಮೂಲಕ ಯಾವುದೇ ಭೇದವಿಲ್ಲದ ಸಮ ಸಮಾಜವನ್ನು ಕಟ್ಟಬೇಕೆಂಬ ವಚನಕಾರರ ಆಲೋಚನೆಗಳು ವಚನ ಸಾಹಿತ್ಯ ಮಾಧ್ಯಮದ ಮೂಲಕ ಪ್ರಕಟಗೊಂಡಿತು. ನಮ್ಮ ಪರಂಪರೆಯ ಅಪೂರ್ವ ಆಸ್ತಿ ಎನಿಸಿದ ವಚನ ವಾಙ್ಮಯವು ಕನ್ನಡ ನಾಡಿನ ಪ್ರಥಮ ಪ್ರಜಾಸಾಹಿತ್ಯವಾಗಿದೆ. ಈ ಸಾಹಿತ್ಯವನ್ನು ಬೆಳಕಿಗೆ ತರಲು ಕಳೆದ ನೂರು ವರ್ಷಗಳಿಂದ ಅನೇಕ ಜನ ವಿದ್ವಾಂಸರು ಅನೇಕ ಸಂಸ್ಥೆಗಳು ದುಡಿಯುತ್ತ ಬಂದುದು ಇದರ ಶ್ರೇಷ್ಠತೆ ಮತ್ತು ಅಗಾಧತೆಯ ದ್ಯೋತಕವಾಗಿದೆ. ವಿಶ್ವವಿದ್ಯಾಲಯದಂತಹ ಶಿಕ್ಷಣ ಸಂಸ್ಥೆಗಳು, ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆಯಂತ

Please cite this article as: ಬಸವರಾಜ ಡಿ ಮತ್ತು ಎಸ್. ಎಂ. ಗಂಗಾಧರಯ್ಯ. (2026). ಡಾ. ಎಂ. ಎಂ. ಕಲಬುರ್ಗಿ ಅವರ ಪ್ರಧಾನ ಸಂಪಾದಕತ್ವದ ವಚನ ಸಂಪುಟಗಳು: ಒಂದು ವಿವೇಚನೆ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(4), 158–164

ಸಾರ್ವಜನಿಕ ಸಂಸ್ಥೆಗಳು, ಲಿಂಗಾಯತ ಮಠಗಳಂಥ ಧಾರ್ಮಿಕ ಸಂಸ್ಥೆಗಳು, ಡಾ. ಫ.ಗು ಹಳಕಟ್ಟಿ ಅವರಂತ ವಿದ್ವಾಂಸ ವ್ಯಕ್ತಿಗಳು ನಿರಂತರ ದುಡಿದರು ವಚನ ಸಾಹಿತ್ಯ ಪೂರ್ಣ ಪ್ರಮಾಣದಲ್ಲಿ ಪ್ರಕಟವಾಗಲು ಒಂದು ನೂರು ವರ್ಷ ಹಿಡಿದಿದ್ದು ಅದರ ಗಾತ್ರ ಬಾಹುಳ್ಯಕ್ಕೆ ಸಾಕ್ಷಿಯಾಗಿದೆ.

ಇಂಥ ಸಮಾಜಮುಖಿ ಸಾಹಿತ್ಯ ಕುರಿತಾದ ಅಧ್ಯಯನ ಎರಡು ಘಟ್ಟಗಳಲ್ಲಿ ನಡೆದಿರುವುದನ್ನು ಗುರುತಿಸಲಾಗಿದೆ. 1) ಪ್ರಾಚೀನ ಕಾಲದ ಅಧ್ಯಯನ, 2) ಆಧುನಿಕ ಕಾಲದ ಅಧ್ಯಯನ. ಪ್ರಾಚೀನ ಕಾಲದ ಅಧ್ಯಯನ 15ನೇ ಶತಮಾನದಿಂದ 19ನೇ ಶತಮಾನದವರೆಗಿನ ಕಾಲಘಟ್ಟದಲ್ಲಿ ಶರಣ ಸಾಹಿತ್ಯ ಸಂಸ್ಕೃತಿ ಕುರಿತಾದ ಕಾವ್ಯ ರಚನೆಯ ಜೊತೆಗೆ ವಚನ ಸಾಹಿತ್ಯ ಶೋಧಿಸುವ, ಕೂಡಿ ಹಾಕುವ ಅವುಗಳನ್ನು ತಾತ್ವಿಕ ನೆಲೆಗಟ್ಟಿನಲ್ಲಿ ಸಂಯೋಜಿಸುವ ಕಾರ್ಯಗಳು ನಡೆದವು. ಇದು ಒಂದು ಅರ್ಥದಲ್ಲಿ ವಚನ ಕುರಿತಾಗಿ ನಡೆದ ಪ್ರಾಚೀನ ಅಧ್ಯಯನವೆಂದು ಹೇಳಲಾಗಿದೆ.

ಆಧುನಿಕ ಕಾಲದ ಅಧ್ಯಯನ 19ನೇ ಶತಮಾನದಿಂದ ಇಲ್ಲಿಯವರೆಗೂ ನಡೆದು ಬಂದಿದೆ ಇದನ್ನು ವಚನ ಪಿತಾಮಹ ಹಳಕಟ್ಟಿ ಅವರನ್ನು ಕೇಂದ್ರವಾಗಿಟ್ಟುಕೊಂಡು ಶಿ.ಶಿ.ಬಸವನಾಳ, ಆರ್.ಸಿ.ಹಿರೇಮಠ, ಎಲ್. ಬಸವರಾಜು, ಎಂ.ಎಸ್.ಸುಂಕಾಪುರ ಅವರ ಕಾರ್ಯಗಳು ಅಧ್ಯಯನ ಯೋಗ್ಯವಾದವು. ಮುಂದೆ ಬಸವನಾಳ ಪರಂಪರೆಯಲ್ಲಿ ಎಂ.ಎಂ.ಕಲಬುರ್ಗಿ, ವಿ. ಶಿವಾನಂದ,ಎಸ್. ವಿದ್ಯಾಶಂಕರ, ಬಿ.ವಿ.ಶಿರೂರು, ವೀರಣ್ಣ ರಾಜೂರು, ಎಸ್.ಶಿವಣ್ಣ, ಬಿ.ವಿ.ಮಲ್ಲಾಪುರ ಮುಂತಾದ ವಿದ್ವಾಂಸರ ತಂಡವೇ ವಚನ ಸಾಹಿತ್ಯ ಸಂಗ್ರಹ ಸಂಕಲನ ಸಂಪಾದನೆ ಹಾಗೂ ಪ್ರಕಟಣೆ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಹೀಗೆ ವಚನ ಸಾಹಿತ್ಯದ ಪ್ರಕಟಣಾ ಕಾರ್ಯ ಫ.ಗು.ಹಳಕಟ್ಟಿ ಅವರಿಂದ ಪ್ರಾರಂಭವಾಗಿ ವಚನ ಸಾಹಿತ್ಯ ಅಧ್ಯಯನ ಸಾಗಿ ಬಂದಿತು. ಒಟ್ಟಿನಲ್ಲಿ ಧಾರ್ಮಿಕ ನೆಲೆ, ಸಾಮಾಜಿಕ ನೆಲೆ, ಸಾಹಿತ್ಯಕ ನೆಲೆ ಹಾಗೂ ಸಾಂಸ್ಕೃತಿಕ ನೆಲೆ ಎಂಬ ನಾಲ್ಕು ನೆಲೆಯಲ್ಲಿ ವಚನ ಅಧ್ಯಯನ ನಡೆಯಿತು. ಈ ನಾಲ್ಕು ನೆಲೆಯಲ್ಲಿ ತಮ್ಮನ ತೊಡಗಿಸಿಕೊಂಡ ವಿದ್ವಾಂಸರಲ್ಲಿ ಎಂ.ಎಂ. ಕಲಬುರ್ಗಿ ಅವರ ಕೆಲಸ ಅಷ್ಟೇ ಮಹತ್ವ ಪೂರ್ಣವಾದದ್ದು.

ಎಂ.ಎಂ.ಕಲಬುರ್ಗಿ ಅವರದು ಬಹುಮೂಲದ ಸಂಶೋಧನೆ. ಶಿಷ್ಟ ಸಾಹಿತ್ಯ, ದಾಖಲು ಸಾಹಿತ್ಯ, ವಚನ ಸಾಹಿತ್ಯ, ಜನಪದ ಸಾಹಿತ್ಯ ಕುರಿತಂತೆ ಶಾಸ್ತ್ರ ಕಾವ್ಯ, ಶಾಸನ, ಐತಿಹಾಸಿಕ ಕೃತಿಗಳ ಸಂಪಾದನೆ ಅಧ್ಯಯನಗಳಲ್ಲಿ ತಮ್ಮನ್ನು ಪೂರ್ಣ ಪ್ರಮಾಣದಲ್ಲಿ ತೊಡಗಿಸಿಕೊಂಡವರು. ವಿಶೇಷವಾಗಿ ಗ್ರಂಥ ಸಂಪಾದನೆ, ಹಸ್ತಪ್ರತಿ, ನಾಮವಿಜ್ಞಾನ, ಸಂಶೋಧನಾಶಾಸ್ತ್ರ ಕುರಿತಾಗಿ ಆ ಕ್ಷೇತ್ರದ ಕಾರ್ಯ ವಿಧಾನಗಳನ್ನು ಕುರಿತು ವೈಧಾನಿಕಾತ್ಮಕ ಕೃತಿಗಳನ್ನು ರಚಿಸಿದವರು. ಕರ್ನಾಟಕ ವಿಶ್ವವಿದ್ಯಾಲಯದ ಬಸವೇಶ್ವರ ಅಧ್ಯಯನ ಪೀಠದ ಪ್ರಾಧ್ಯಾಪಕರಾಗಿ, ನಿರ್ದೇಶಕರಾಗಿ, ಆರ್.ಸಿ ಹಿರೇಮಠ ಅವರು ರೂಪಿಸಿದ ವಚನ ಸಾಹಿತ್ಯ ಪ್ರಕಟಣಾ ಯೋಜನೆಯ ಸದಸ್ಯರಾಗಿ 'ವಚನ ಸಾಹಿತ್ಯ' ಕುರಿತು ವಿಶೇಷ ಅಧ್ಯಯನ ಮಾಡಿದರು. ಹೀಗಾಗಿ ಕಾವ್ಯ, ಶಾಸ್ತ್ರ ಅಧ್ಯಯನಗಳ ಜೊತೆಗೆ ವಚನ ಸಾಹಿತ್ಯ ಅಧ್ಯಯನದಲ್ಲೂ ಅಷ್ಟೇ ಪ್ರಮಾಣದಲ್ಲಿ ಎಂ.ಎಂ.ಕಲಬುರ್ಗಿ ಅವರು ತಮ್ಮನ್ನು ತೊಡಗಿಸಿಕೊಂಡರು. ಆ ಮೂಲಕ ಬಸವಸ್ತೋತ್ರದ ವಚನಗಳು, ಬಸವಣ್ಣನ ಟೀಕಿನ ವಚನಗಳು, ಚೆನ್ನಬಸವಣ್ಣನವರ ಷಟ್‌ಸ್ಥಳ ವಚನ ಮಹಾ ಸಂಪುಟ, ವಚನ ಸಂಕಲನ ಸಂಪುಟ–4, ವಚನ ಸಂಕಲನ ಸಂಪುಟ–6, ಬಸವಣ್ಣನವರ ವಚನ ಸಂಪುಟ, ಸಂಕೀರ್ಣ ವಚನ ಸಂಪುಟ, ವಚನ ಶಾಸ್ತ್ರಸಾರ, ಸಿದ್ಧರಾಮನ ವಚನಗಳು, ಪರಮಾನಂದ ಸುಧೆ. ಏಕೋತ್ತರ ಶತಸ್ಥಲ ಮುಂತಾದವು ಇವರ ವಚನ ಸಾಹಿತ್ಯ ಸಂಪಾದನೆಯ ಪ್ರಮುಖ ಕೃತಿಗಳು.

ಎಂ.ಎಂ ಕಲಬುರ್ಗಿ ಅವರು ಸಂಪಾದನೆಯಲ್ಲಿ ತಮ್ಮದೇ ಆದ ವೈಧಾನಿಕತೆಯನ್ನು ರೂಪಿಸಿಕೊಂಡು ಪಾಠ ಪರಿಷ್ಕರಣಕ್ಕೆ ಹೊಸ ಆಯಾಮವನ್ನು ನೀಡಿದರು. ದೇಶಿ ಸಾಹಿತ್ಯವೆನಿಸಿದ ವಚನ ಸಾಹಿತ್ಯ ಸಂಪಾದನೆಗೆ ಭಾಷೆ, ವಿಷಯ, ಶೈಲಿ ದೃಷ್ಟಿಯಿಂದ ಉತ್ತಮವಾದ ಕೇವಲ ಒಂದು ಹಸ್ತಪ್ರತಿ ಕಟ್ಟನ್ನು ಆಯ್ದುಕೊಂಡು ಆಧಾರಪ್ರತಿಯೆಂದು ಭಾವಿಸಿ, ಅದೇ ಕುಟುಂಬದ ಒಂದೆರಡು ಪ್ರತಿಗಳನ್ನು ಪಾಠಾಂತರಕ್ಕಾಗಿ ಬಳಸಿಕೊಳ್ಳುವ ವಿಧಾನವನ್ನು ರೂಪಿಸಿದರು. ಇಂಥ ಅನೇಕ ಸಿದ್ಧಾಂತಗಳನ್ನು ಹೊಸದಾಗಿ ತಿಳಿಸಿ ಗ್ರಂಥ ಸಂಪಾದನಶಾಸ್ತ್ರದ ವಿಧಾನದಲ್ಲಿ ಬದಲಾವಣೆಯನ್ನು ತಂದರು. ಮುಖ್ಯವಾಗಿ ಕರ್ನಾಟಕದಲ್ಲಿ ವಚನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬೆಂಗಳೂರು ಭಾಗದಲ್ಲಿ ಡಾ.ಎಸ್.ವಿದ್ಯಾಶಂಕರ್, ಮೈಸೂರು ಭಾಗದಲ್ಲಿ ಡಾ.ಎಲ್.ಬಸವರಾಜು, ಕಲಬುರ್ಗಿ ವಿಭಾಗದಲ್ಲಿ ಡಾ.ಎಂ.ಎಸ್.ಲಡ್ಡೆ, ಧಾರವಾಡ ಭಾಗದಲ್ಲಿ ಆರ್.ಸಿ.ಹಿರೇಮಠ ನೇತೃತ್ವದಲ್ಲಿ ಅನೇಕ ಜನ ವಿದ್ವಾಂಸರು ವಚನ ಸಾಹಿತ್ಯ ಶೋಧ ಸಂಪಾದನೆಯಲ್ಲಿ ದುಡಿದ ಮಹನೀಯರಿದ್ದಾರೆ. ಈ ಎಲ್ಲ ವಿದ್ವಾಂಸರ ವಚನ ಅಧ್ಯಯನ ಕುರಿತಾದ ಆಲೋಚನೆಗಳಿಗಿಂತ ಡಾ.ಎಂ.ಎಂ.ಕಲಬುರ್ಗಿ ಅವರ ವಿಭಿನ್ನ ಆಲೋಚನಾ ಮಾದರಿಯು ಅವರ ವಚನ ಸಂಪಾದನೆಯಲ್ಲಿ ಕಂಡುಬರುತ್ತದೆ.

ವಚನ ಅಧ್ಯಯನದಲ್ಲಿ ತೊಡಗಿಸಿಕೊಂಡ ಡಾ.ಕಲಬುರ್ಗಿ ಅವರು ವಚನಗಳಂತೆ ಶಿವಶರಣರಿಂದ ರಚನೆಯಾದ ಸ್ವರವಚನ ಸಾಹಿತ್ಯ, ಕಾಲಜ್ಞಾನ ಸಾಹಿತ್ಯ, ವಚನ ಟೀಕು ಸಾಹಿತ್ಯ, ಶೂನ್ಯ ಸಂಪಾದನೆ ಸಾಹಿತ್ಯ ಕುರಿತಾಗಿ ವಿದ್ವಾಂಸರ ಗಮನವನ್ನು ಆ ಕಡೆ ಸೆಳೆಯುವಲ್ಲಿ ಯಶಸ್ವಿಯಾದರು. ಹತ್ತಾರು ಯೋಜನೆಗಳನ್ನು ರೂಪಿಸುವುದರ ಮೂಲಕ ವಚನ ಪರಿಸರನಿಷ್ಠ ಸಾಹಿತ್ಯದ ವಿವಿಧ ಮಗ್ಗಲುಗಳನ್ನು ಅಧ್ಯಯನಕ್ಕೆ ಒಳಪಡಿಸಿದ್ದಾರೆ. ಆರಂಭದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾಗಿ ಅವರು ವಚನ ಸಾಹಿತ್ಯ ಪ್ರಕಟಣೆ ಅಧ್ಯಯನದಲ್ಲಿ ಮಾಡಿದ ಕೆಲಸದಿಂದ ಹಿಡಿದು ಸ್ವತಃ ಅವರು ಈ ಕ್ಷೇತ್ರದಲ್ಲಿ ದುಡಿದಿರುವುದಲ್ಲದೆ ಇತರರನ್ನೂ ದುಡಿಯುವಂತೆ ಮಾಡಿದರು. ಹೀಗಾಗಿ ಹತ್ತಾರು ಧಾರ್ಮಿಕ ಸಂಸ್ಥೆಗಳಿಂದ, ಸರಕಾರದಿಂದ ಹಾಗೂ ಖಾಸಗಿ ವ್ಯಕ್ತಿಗಳಿಂದ ವಚನ ಸಾಹಿತ್ಯ ಅಧ್ಯಯನವನ್ನು ನಿರಂತರವಾಗಿ ಮುಂದುವರಿಸಿದರು. ಹೀಗಾಗಿ ವಚನ ಸಾಹಿತ್ಯ ಸಂಗ್ರಹ–ಸಂಪಾದನೆ ಹಾಗೂ ವಚನಕಾರರ ಅಂಕಿತಶೋಧ, ಕಾಲನಿರ್ಣಯ, ವಚನಗಳ ನಿರ್ವಚನ ಹಾಗೂ ವಚನ ಸಂಬಂಧಿ ಅನುಷ್ಠಾನಕ್ಕೆ ತಂದ ಯೋಜನೆಗಳು ಅವರ ಪ್ರಧಾನ ವಚನ ಸಂಪಾದಕತ್ವದ ವಿಶೇಷತೆಯಾಗಿದೆ.

ಎಂ.ಎಂ.ಕಲಬುರ್ಗಿ ಅವರು ಹಲವು ಕ್ಷೇತ್ರಗಳಲ್ಲಿ ಕಾರ್ಯ ಕೈಗೊಂಡಿದ್ದರೂ ವಚನ ಸಾಹಿತ್ಯದಲ್ಲಿ ಸಾಕಷ್ಟು ಕಾರ್ಯ ನಿರ್ವಹಿಸಿರುವುದು ವಿಶೇಷ ಸಂಗತಿಯಾಗಿದೆ. ಹೊಸ ವಚನಗಳನ್ನು ಹುಡುಕುವ, ವಚನಗಳನ್ನು ವಿವಿಧ ನೆಲೆಗಳಲ್ಲಿ ಅಧ್ಯಯನ ಮಾಡುವ, ವಚನಗಳ ಪರಿಷ್ಕರಣ ಸಂಪಾದನೆಗೆ ಹೊಸ ವೈಧಾನಿಕತೆಯನ್ನು ರೂಪಿಸಿಕೊಂಡ ಬಗೆ, ಹಾಗೆಯೇ ವಚನ ಸಾಹಿತ್ಯವನ್ನು ವಿಶ್ವಮಾನ್ಯ ಮಟ್ಟಕ್ಕೆ ಕೊಂಡೊಯ್ಯುವ ಹಂಬಲವನ್ನು ಸಮಗ್ರ ವಚನ ಸಂಪುಟದಲ್ಲಿ ಕಾಣಲಾಗಿದೆ.

ಎಂ.ಎಂ.ಕಲಬುರ್ಗಿ ಅವರು ವಚನ ಸಾಹಿತ್ಯವನ್ನು ಸಂಪಾದನೆ ಮಾಡುವ ಸಂದರ್ಭದಲ್ಲಿ, ಹಾಗೆಯೇ ಅಧ್ಯಯನ ಮಾಡುವ ಸಂದರ್ಭದಲ್ಲಿ ಅವರಿಗೆ ಗೋಚರವಾದ ಹಲವು ವಚನಗಳನ್ನು ಪ್ರಕಟಿಸಿದ್ದಾರೆ. ಬಸವಣ್ಣ, ಅಲ್ಲಮಪ್ರಭು, ಚೆನ್ನಬಸವಣ್ಣ ಹೀಗೆ ಹಲವು ವಚನಕಾರರ ಹೊಸ ವಚನಗಳನ್ನು ಶೋಧಿಸಿದ್ದಾರೆ. ಅದರಲ್ಲೂ ಚೆನ್ನಬಸವಣ್ಣನವರ ಸಮಗ್ರ ವಚನ ಸಾಹಿತ್ಯವನ್ನು ಸಂಪಾದನೆ ಮಾಡಬೇಕೆಂಬ ಹಂಬಲದಿಂದ ಎಡೆಬಿಡದೆ ಸಂಪಾದನಾ ಕಾರ್ಯದಲ್ಲಿ ತೊಡಗಿದಾಗ ಒಂದು ಕೃತಿಯಲ್ಲಿ ಚೆನ್ನಬಸವಣ್ಣನವರ 8 ಹೊಸ

ವಚನಗಳನ್ನು, ಇನ್ನೂ ಕೆಲವು ಕೃತಿಗಳಲ್ಲಿ ಹಲವು ವಚನಗಳನ್ನು ಶೋಧಿಸಿರುವುದು ವಿಶೇಷವಾಗಿ ಕಂಡುಬರುತ್ತದೆ.

ಎಂ.ಎಂ.ಕಲಬುರ್ಗಿ ಅವರ ಸಂಪಾದನ ಕಾರ್ಯವನ್ನು ಸಂಗ್ರಹ, ಸಂಕಲನ ಮತ್ತು ಸಂಪಾದನೆ ಎಂದು ಮೂರು ನೆಲೆಯಲ್ಲಿ ಗುರುತಿಸಬಹುದು. ಯಾವುದೇ ತಾತ್ವಿಕ ಹಿನ್ನೆಲೆಯನ್ನು ಇಟ್ಟುಕೊಳ್ಳದೆ ಒಬ್ಬೊಬ್ಬ ಅಥವಾ ಹಲವು ವಚನಕಾರ/ವಚನಕಾರ್ತಿಯರ ವಚನಗಳನ್ನು ಒಂದೆಡೆ ಸಂಪಾದಿಸುವುದು ಸಂಗ್ರಹ, ಒಂದು ತಾತ್ವಿಕತೆಯನ್ನು ಇಟ್ಟುಕೊಂಡು ಸ್ಥಲಸಹಿತವಾಗಿ ಇಲ್ಲವೇ ಸ್ಥಲರಹಿತವಾಗಿ ಸಂಪಾದನೆ ಮಾಡುವುದು ಸಂಕಲನ ಎನಿಸುತ್ತದೆ. ಹಾಗೆಯೇ ಸಂಭಾಷಣೆಯ ರೂಪದಲ್ಲಿ ವಚನ, ಸ್ವರವಚನಗಳಿಗೆ ಅಲ್ಲಲ್ಲಿ ಸ್ವಯಂರಚಿತ ಗದ್ಯವನ್ನು ಜೋಡಿಸುವ ಕಾರ್ಯ ಸಂಪಾದನೆ ಎನಿಸುತ್ತದೆ. ಈ ಮೂರು ನೆಲೆಯಲ್ಲಿ ಎಂ.ಎಂ.ಕಲಬುರ್ಗಿ ಅವರು ಸಂಪಾದನ ಕಾರ್ಯವನ್ನು ಪೂರೈಸಿದ್ದಾರೆ.

ಎಂ.ಎಂ.ಕಲಬುರ್ಗಿಯವರೇ ಆವೃತ್ತಿಗಳ ಪ್ರಸ್ತಾವನೆಯಲ್ಲಿಯ 'ಪರಿಷ್ಕರಣ,' ವಿಭಾಗದಲ್ಲಿ ಹೇಳಿರುವಂತೆ ಪ್ರಾಚೀನ ಕಾಲದಲ್ಲಿ ವಚನಸಾಹಿತ್ಯ ಸೃಜನ ಮತ್ತು ಸಂಪಾದನವೆಂಬ ಎರಡು ರೀತಿಗಳಲ್ಲಿ ಪ್ರಕಟವಾಗಿದೆ. "ಇಂದು ನಡೆಯುತ್ತಲಿರುವುದು ಪರಿಷ್ಕರಣವೆಂಬ ಮೂರನೆಯ ರೀತಿ. ಹನ್ನೆರಡನೆಯ ಶತಮಾನದಲ್ಲಿ ಪ್ರಕಟವಾದುದು ಸೃಜನ. ಈ ಸೃಜನವನ್ನು ಬಳಸಿ ಹದಿನೈದನೆಯ ಶತಮಾನದಲ್ಲಿ ಸಂಯೋಜಿಸಲ್ಪಟ್ಟುದು ಸಂಪಾದನ. ಈ ಸೃಜನ ಸಾಹಿತ್ಯದ ಪಾಠಾಂತರ, ಸಂಪಾದ ಸಾಹಿತ್ಯದ ಪಾಠಾಂತರ ಮತ್ತು ಸೃಜನವನ್ನು ಸಂಪಾದನೆಗೊಳಿಸುವಲ್ಲಿ ಉದ್ಭವಿಸಿದ ಪಾಠಾಂತರವೆಂಬ ಮೂರು ಬಗೆಯ ಪಾಠಾಂತರಗಳಿಗೆ ತುತ್ತಾಗುತ್ತ ಬಂದ ವಚನ ಹಸ್ತಪ್ರತಿಗಳು ನಮಗೆ ಸಿಗುತ್ತವೆ. ವಚನ ಪರಿಷ್ಕರಣವೆಂಬುದು ವೈಜ್ಞಾನಿಕ ವಿಧಾನಗಳ ಮೂಲಕ ಇಂಥ 'ಪ್ರತಿ'ಯನ್ನು 'ಕೃತಿ'ಯನ್ನಾಗಿಸುವ ಕ್ರಿಯೆಯಾಗಿದೆ." ಹಸ್ತಪ್ರತಿಗಳಲ್ಲಿ ಸ್ಖಾಲಿತ್ಯ ಹಾಗೂ ಪಾಠಾಂತರಗಳಿಗೆ ಕವಿ, ಸಹೃದಯ ಹಾಗೂ ಲಿಪಿಕಾರರು ಕಾರಣರಾಗುತ್ತಾರೆ. ಅದರಲ್ಲೂ ದೇಸಿ ಸಾಹಿತ್ಯದಲ್ಲಿ ಪಾಠಾಂತರಗಳು ಹೆಚ್ಚು ಇಂಥ ಪಾಠಪರಿಷ್ಕರಣ ಪಾಠಾಂತರ ಶೋಧದಲ್ಲಿ ಸಾಂಸ್ಕೃತಿಕ ಪರಿಷ್ಕರಣ, ಪರಿಷ್ಕರಣದ ಪರಿಷ್ಕರಣ ಮಾದರಿಗಳನ್ನು ಎಂ.ಎಂ.ಕಲಬುರ್ಗಿ ಅವರು ಮೊದಲ ಬಾರಿಗೆ ಅನುಸರಿಸಿದ್ದಾರೆ.

ಬಸವಣ್ಣನವರ ವಚನ ಸಂಪುಟ

ಬಸವ ಯುಗದ ವಚನ ಮಹಾಸಂಪುಟ'ದಲ್ಲಿ ಸೇರಿದ್ದ ಬಸವಣ್ಣನವರ ವಚನ ಸಂಪುಟವನ್ನು ಪ್ರತ್ಯೇಕಿಸಿ ಮತ್ತೊಮ್ಮೆ ಅಮೂಲಾಗ್ರವಾಗಿ ಪರಿಶೀಲನೆಗೆ ಒಳಪಡಿಸಿದ್ದಾರೆ ಬಸವಣ್ಣನವರ ವಚನಗಳನ್ನು ಷಟ್‌ಸ್ಥಳ ವಚನಗಳು ಮತ್ತು ಹೆಚ್ಚಿನ ವಚನಗಳು ಎಂಬ ಎರಡು ಕಾಂಡಗಳಲ್ಲಿ ಜೋಡಿಸಲಾಗಿದೆ. ಆವೃತ್ತಿಯಿಂದ ಆವೃತ್ತಿಗೆ ಮುದ್ರಣ ದೋಷಗಳನ್ನು ಸರಿಪಡಿಸಲಾಗಿದೆ. ಷಟ್‌ಸ್ಥಳ ವಚನಗಳು ಒಟ್ಟು 960 ಎಂದು ಮತ್ತು ಹೆಚ್ಚಿನ ವಚನಗಳು 447 ಎಂದು ಗುರುತಿಸಲಾಗಿದೆ. ಅನುಬಂಧದಲ್ಲಿ ಕಠಿಣ ಪದಕೋಶ, ಷಟ್‌ಸ್ಥಳ ವಚನಗಳ ಅಕಾರಾದಿ ಹಾಗೂ ಆಕರ ಗ್ರಂಥಗಳನ್ನು ಜೋಡಿಸಲಾಗಿದೆ. ಒಟ್ಟಿನಲ್ಲಿ ಈ ಸಂಪುಟ ಶುದ್ಧ ರೂಪದಲ್ಲಿ ಹೊರಬರುವಂತೆ ನೋಡಿಕೊಳ್ಳಲಾಗಿದೆ.

ಅಲ್ಲಮ ಪ್ರಭುದೇವರ ವಚನ ಸಂಪುಟ

ಅನುಪಮ ಅನುಭವಿಯಾದ ಅಲ್ಲಮ ಪ್ರಭುದೇವರ ಅನೇಕ ವಚನಗಳಲ್ಲಿ ಉಳಿದುಕೊಂಡ ಪಾಠದೋಷಗಳು, ಬಿಟ್ಟುಹೋದ ಸಾಲುಗಳು ಮತ್ತು ಪದಗಳು ಅಲ್ಲದೆ ಕೆಲವೆಡೆ ಸೇರಿಕೊಂಡ ಅಪಾರ್ಥ ಕಲ್ಪಿಸುವ ಪದಗಳನ್ನು ಮತ್ತೊಮ್ಮೆ ಸಮಗ್ರವಾಗಿ ಮರುಪರಿಶೀಲನೆಗೆ ಒಳಪಡಿಸಿ ಸರಿಪಡಿಸಲಾಗಿದೆ.

ಆವೃತ್ತಿಯ ಮುಖ್ಯ ಕಾರ್ಯ ಮೂಲಪಠ್ಯದಲ್ಲಿ ಬಿಟ್ಟುಹೋದ ಸಾಲು ಮತ್ತು ಪದಗಳನ್ನು ಅನ್ಯ

ಆಕರಗಳ ಸಹಾಯದಿಂದ ಸೇರಿಸಲಾಗಿದೆ. ಅಪಾರ್ಥ ಉಂಟು ಮಾಡುವ ಪದಗಳನ್ನು ತೆಗೆಯಲಾಗಿದೆ. ಅನುಬಂಧದಲ್ಲಿನ ಕಠಿಣ ಪದಕೋಶ ಆಕರ ಗ್ರಂಥಗಳ ಯಾದಿಯನ್ನು ಸರಿಗೊಳಿಸಲಾಗಿದೆ. ಬಸವಣ್ಣನವರ ವಚನಗಳಂತೆ ಅಲ್ಲಮ ಪ್ರಭು ದೇವರ ವಚನಗಳನ್ನು ಷಟ್‌ಸ್ಥಳ ವಚನಗಳು ಮತ್ತು ಹೆಚ್ಚಿನ ವಚನಗಳು ಎಂಬ ಎರಡು ಕಾಂಡಗಳಲ್ಲಿ ಜೋಡಿಸಲಾಗಿದೆ ಎರಡು ಕಾಂಡಗಳನ್ನು ಸೇರಿಸಿ ಒಟ್ಟು 1612 ಅಲ್ಲಮ ಪ್ರಭುದೇವರವಚನಗಳೆಂದು ಗುರುತಿಸಲಾಗಿದೆ.

ಚೆನ್ನಬಸವಣ್ಣನವರ ವಚನ ಸಂಪುಟ

ಚೆನ್ನಬಸವಣ್ಣನವರ ವಚನ ಸಂಪುಟದಲ್ಲಿನ ಪರಿಷ್ಕರಣದ ಸಂಗತಿಗಳೆಂದರೆ, ಹಿಂದಿನ ಆವೃತ್ತಿಗಳಲ್ಲಿ ಕಲ್ಪಿಸಿಕೊಂಡಿದ್ದ ಕಾಂಡ–1 ಷಟ್ಪಲ ವಚನಗಳು, ಕಾಂಡ–2 ಹೆಚ್ಚಿನ ವಚನಗಳು ಎಂಬ ವಿಭಾಗಗಳನ್ನು ಇಲ್ಲಿಯೂ ಉಳಿಸಿಕೊಳ್ಳಲಾಗಿದೆ. ಆದರೆ ಒಂದನೆಯ ಕಾಂಡದಲ್ಲಿ ಬಳಸಿಕೊಂಡಿದ್ದ 871 ವಚನಗಳನ್ನೊಳಗೊಂಡ ಷಟ್ಪಲ ಹಸ್ತಪ್ರತಿಯಲ್ಲಿ ಸೇರಿದ್ದ ಅನ್ಯರ ಸುಮಾರು 20 ವಚನಗಳನ್ನು ಅಲ್ಲಿ ಕೈಬಿಡಲಾಗಿತ್ತು. ಆದರೆ ಮೂಲ ಕಟ್ಟಿಗೆ ಧಕ್ಕೆಯನ್ನುಂಟುಮಾಡಬಾರದೆಂಬ ಉದ್ದೇಶದಿಂದ ಈ ಆವೃತ್ತಿಯಲ್ಲಿ ಎಲ್ಲ 871 ವಚನಗಳನ್ನು ಇಟ್ಟು ಕೊಡಲಾಗಿದೆ.ಎರಡನೆಯ ಆವೃತ್ತಿಯ ಎರಡನೆಯ ಕಾಂಡದಲ್ಲಿ 'ಹೆಚ್ಚಿನ ವಚನ' ವಲ್ಲದೆ 'ಇನ್ನೂ ಹೆಚ್ಚಿನ ವಚನ' ಗಳೆಂಬ ಭಾಗವನ್ನು ಕಲ್ಪಿಸಿಕೊಳ್ಳಲಾಗಿದ್ದಿತು.ಈ ಆವೃತ್ತಿಯಲ್ಲಿ ಆ 'ಇನ್ನೂ ಹೆಚ್ಚಿನ ವಚನ' ಗಳನ್ನು 'ಹೆಚ್ಚಿನ ವಚನ' ಗಳಲ್ಲಿಯೇ ಸೂಕ್ತಸ್ಥಾನದಲ್ಲಿ ಸೇರಿಸಿ ಕೊಡಲಾಗಿದೆ. ಹಿಂದಿನ ಆವೃತ್ತಿಗಳಲ್ಲಿ ಆಯಾ ಸಂಪುಟದ ಕೊನೆಗೆ ಅನುಬಂಧವಾಗಿ ಕೊಟ್ಟಿದ್ದ ಅಕಾರಾದಿಯನ್ನು ಮತ್ತು ಕ್ರೋಡೀಕರಿಸಿಕೊಂಡ ಕಠಿಣ ಪದಕೋಶ–ಆಕರಗ್ರಂಥಗಳ ಯಾದಿಯನ್ನು ಪ್ರಸ್ತುತ ಸಂಪುಟದ ಕೊನೆಗೆ ಜೋಡಿಸಿಲಾಗಿದೆ. ಎರಡು ಕಾಂಡಗಳಲ್ಲಿನ ಒಟ್ಟು ವಚನಗಳು 1764 ಎಂದು ಗುರುತಿಸಲಾಗಿದೆ.

ಸಿದ್ದರಾಮೇಶ್ವರ ವಚನ ಸಂಪುಟ

ಸಿದ್ಧರಾಮೇಶ್ವರ ವಚನ ಸಂಪುಟದ ಈ ಆವೃತ್ತಿಯಲ್ಲಿ ಪಠ್ಯದ ಪಾಠದಲ್ಲಿ ಸಾಕಷ್ಟು ತಿದ್ದುಪಡಿಗಳಾಗಿವೆ. ಹಿಂದಿನ ಆವೃತ್ತಿಯಲ್ಲಿ ಪುನರಾವರ್ತನೆಗೊಂಡ ಕೆಲವು ವಚನಗಳನ್ನು ಕೈ ಬಿಡಲಾಗಿದೆ. ಮರುಳಶಂಕರದೇವರ ಎರಡು ವಚನಗಳು (1097 ಮತ್ತು 1123) ಸಿದ್ಧರಾಮನ ವಚನಗಳಾಗಿ (ವ. 294, 1088) ಬಂದಿದ್ದು, ಇವನ್ನು ಕೈಬಿಡಲಾಗಿದೆ. ಅಲ್ಲಮಪ್ರಭುದೇವರ ವಚನ ಸಂಪುಟದ ವ. 1635ನೇ ವಚನ ಸಿದ್ಧರಾಮನ ವಚನವಾಗಿ (ವ. 1173) ಬಂದಿದ್ದು ಇದನ್ನು ಕೈಬಿಡಲಾಗಿದೆ. ಶಿವಶರಣೆಯರ ವಚನಸಂಪುಟದ ಅಕ್ಕಮಹಾದೇವಿಯ ಎರಡು ವಚನಗಳು (280, 206) ಸಿದ್ಧರಾಮನ ವಚನಗಳಾಗಿ (ವ. 1268, 1427) ಬಂದಿದ್ದು ಇವನ್ನು ಕೈಬಿಡಲಾಗಿದೆ. ಕಾಂಡ : 1 ವಿವಿಧ ಸಂಕಲನಗಳಿಂದ ಆಯ್ದ ವಚನಗಳು. ಕಾಂಡ : 2 ಷಟ್ಪಲ ವಚನಗಳು ಎಂದು ಒಟ್ಟು 1962 ವಚನಗಳನ್ನು ಗುರುತಿಸಲಾಗಿದೆ.

ಶಿವಶರಣೆಯರ ವಚನ ಸಂಪುಟ

ಶಿವಶರಣೆಯರ ವಚನ ಸಂಪುಟದಲ್ಲಿ 36 ಜನ ಶಿವಶರಣೆಯರ ಒಟ್ಟು 1350 ವಚನಗಳನ್ನು ಸಂಗ್ರಹಿಸಲಾಗಿದೆ. ಶಿವಶರಣೆಯರ ವಚನ ಸಂಪುಟದಲ್ಲಿ ಎಲ್ಲ ವಚನಗಳನ್ನು ಈಚೆಗೆ ದೊರೆತ ಹೊಸ ಆಕರಗಳ ಮತ್ತು ವಿದ್ವಾಂಸರು ಸೂಚಿಸಿದ ತಿದ್ದುಪಡಿ, ಸಲಹೆ–ಸೂಚನೆಗಳ ಹಿನ್ನೆಲೆಯಲ್ಲಿ ಆಮೂಲಾಗ್ರವಾಗಿ ಮತ್ತೊಮ್ಮೆ ಪರಿಶೀಲಿಸಿ ಮರುಪರಿಷ್ಕರಣಕ್ಕೆ ಒಳಪಡಿಸಿ, ಉಳಿದಿರಬಹುದಾದ ಪುನರುಕ್ತಿ, ಪಾಠದೋಷ, ಮುದ್ರಣದೋಷಗಳನ್ನು ಬಹುಮಟ್ಟಿಗೆ ಸರಿಪಡಿಸಲು ಶ್ರಮಿಸಲಾಗಿದೆ. ಅದರಿಂದಾಗಿ ಈ ಕೆಳಗಿನ ಕೆಲವು ವ್ಯತ್ಯಾಸಗಳು ಈ ಆವೃತ್ತಿಯಲ್ಲಿ ಕಾಣಿಸಿಕೊಂಡಿವೆ. ಅಕ್ಕಮಹಾದೇವಿಯ 8 ಪುನರುಕ್ತ ವಚನಗಳನ್ನು ಕೈ ಬಿಡಲಾಗಿದೆ ಹೊಸದಾಗಿ 5 ವಚನಗಳನ್ನು ಸೇರಿಸಲಾಗಿದೆ.

ಹೀಗಾಗಿ ಆಕೆಯ ಒಟ್ಟು ವಚನ ಸಂಖ್ಯೆ 434 ಇದ್ದುದು 431 ಕ್ಕೆ ಇಳಿದಿದೆ

ಸಂಕೀರ್ಣ ವಚನ ಸಂಪುಟ 6

ಪ್ರಸ್ತುತ ಸಂಕೀರ್ಣ ವಚನ ಸಂಪುಟದಲ್ಲಿ ಬಸವ ಯುಗದ ಉಳಿದ ವಚನಕಾರರು ಮತ್ತು ಬಸವೋತ್ತರ ಯುಗದ ಅನೇಕ ವಚನಕಾರರ ಎಲ್ಲ ವಚನಗಳು ಸೇರಿದಂತೆ ಸಾವಿರಾರು ವಚನಗಳನ್ನು ಹತ್ತು ಸಂಪುಟಗಳಲ್ಲಿ ಸಂಪಾದಿಸಲಾಗಿದೆ. ಎಲ್ಲ ಸಂಪುಟಗಳನ್ನು ಆಮೂಲಾಗ್ರವಾಗಿ ಮರುಪರಿಷ್ಕರಣೆಗೆ ಒಳಪಡಿಸಲಾಗಿದೆ. ಅಂದರೆ ಪ್ರಕ್ಷಿಪ್ತ ವಚನ, ಪಾಠದೋಷ, ಮುದ್ರಣ ದೋಷ, ಪುನರುಕ್ತಿದೋಷಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿ ಸರಿಪಡಿಸಲಾಗಿದೆ. ಸಂಪೂರ್ಣ ಪುನರುಕ್ತ ವಚನಗಳನ್ನು ಕೈಬಿಡಲಾಗಿದೆ. ಅಲ್ಪ ಸ್ವಲ್ಪ ವ್ಯತ್ಯಾಸ ಹೊಂದಿದ ಒಬ್ಬನೇ ವಚನಕಾರ ಇಲ್ಲವೆ ಭಿನ್ನ ವಚನಕಾರನ ವಚನಗಳನ್ನು ಹಾಗೇ ಉಳಿಸಿಕೊಂಡು ಎರಡನ್ನೂ ಹೋಲಿಸಿ ನೋಡಲು ವಚನದ ಕೆಳಗೆ ಸೂಚನೆ ಕೊಡಲಾಗಿದೆ. ಅಂಕಿತ ಪಲ್ಲಟವಾದ ವಚನಗಳನ್ನು ಆಯಾ ವಚನಕಾರನ ರಚನಾ ಶೈಲಿಯನ್ನು ಆಧರಿಸಿ ಒಂದೆಡೆ ಉಳಿಸಿಕೊಂಡು ಮತ್ತೊಂದು ಕಡೆ ಕೈ ಬಿಡಲಾಗಿದೆ.

ಹಿಂದಿನ ಮೂರು ಆವೃತ್ತಿಗಳಲ್ಲಿ ಶರಣರ ಹೆಸರು ಮತ್ತು ಅಂಕಿತ ಸಮಸ್ಯೆ, ಪ್ರಕ್ಷಿಪ್ತ ವಚನಕಾರರು ಮತ್ತು ವಚನಗಳು, ನಿಜವಚನಗಳ ಪಾಠ ಶುದ್ದೀಕರಣ ಕುರಿತಂತೆ ಎದುರಾದ ಎಲ್ಲ ಸಮಸ್ಯೆಗಳನ್ನು ಸೂಕ್ತ ಆಕರಗಳ ಸಹಾಯದಿಂದ ಪರಿಹರಿಸಿಕೊಳ್ಳಲಾಗಿದೆ. ಪ್ರಸ್ತುತ ಸಂಪುಟದ ಸಂಪಾದನೆ ವಿಧಾನ "ಪರಿಷ್ಕರಣದ ಪರಿಷ್ಕರಣ" ಮಾದರಿಯನ್ನು ಅನುಸರಿಸಲಾಗಿದೆ. ಅಂದರೆ ಹೊಸದಾಗಿ ವಚನಗಳು ಸಿಗುವುದು ದುರ್ಲಭ. ಹೀಗಾಗಿ ಈ ಹಿಂದೆ ಪ್ರಕಟವಾದ ಮುದ್ರಿತ ಪ್ರತಿಗಳನ್ನು ಆಧಾರವಗಿಟ್ಟುಕೊಂಡು ಪರಿಷ್ಕರಿಸಲಾಗಿದೆ. ವಿಶೇಷವಾಗಿ ಪ್ರಥಮ ಆವೃತ್ತಿಯ ದೋಷಗಳು ದ್ವಿತೀಯ ಆವೃತ್ತಿಯಲ್ಲಿ, ದ್ವಿತೀಯ ಆವೃತ್ತಿಯಲ್ಲಿ ಉಳಿದ ದೋಷಗಳು ತೃತೀಯ ಆವೃತ್ತಿಯಲ್ಲಿ ಸರಿಪಡಿಸಿಕೊಂಡು ಅಲ್ಲಲ್ಲಿ ಕಂಡುಬರುವ ಮುದ್ರಣದೋಷಗಳನ್ನು, ಬಿಟ್ಟು ಹೋಗಿರುವ ವಚನ ಸಾಲುಗಳಂಥ ಕಣ್ ತಪ್ಪಿನಿಂದಾದ ದೋಷಗಳನ್ನು ಸರಿಪಡಿಸಲಾಗಿದೆ. ವಚನಗಳ ಅರ್ಥ ಸ್ಪಷ್ಟತೆಗಾಗಿ ಚರಣಗಳ ವಿನ್ಯಾಸವನ್ನು ಪುನರ್ ಸಂಯೋಜಿಸಲಾಗಿದೆ.

ಇದಿಷ್ಟು ಈ ಸಂಕೀರ್ಣ ವಚನ ಸಂಪುಟಗಳ ಆವೃತ್ತಿಯ ಪರಿಷ್ಕರಣೆಗೆ ಸಂಬಂಧಿಸಿದಂತೆ ಹೇಳಬಹುದಾದ ಮಾತುಗಳಾಗಿವೆ.

ಎಂ.ಎಂ.ಕಲಬುರ್ಗಿ ಅವರು 1993ರಲ್ಲಿ ಬಸವಣ್ಣನವರ ವಚನ ಸಂಪುಟ ಪರಿಷ್ಕರಣೆ ಮಾಡುವ ಮೂಲಕ ಸಂಪಾದನೆ ಮಾಡಿದ್ದರೂ ಕೂಡ 2001ರ 2ನೇ ಆವೃತ್ತಿಯ ಸಂದರ್ಭದಲ್ಲಿ ಮತ್ತೆ ಮರುಪರಿಷ್ಕರಣೆ ಮಾಡುವ ಮೂಲಕ ಸಂಪಾದಿಸಿದ್ದಾರೆ. 3ನೇ ಆವೃತ್ತಿ 2016ರಲ್ಲಿ ಬೈಬಲ್ ಮುದ್ರಣ ಮಾದರಿಯಲ್ಲಿ ಪ್ರಕಟ ಮಾಡುವ ಸಂದರ್ಭದಲ್ಲಿ ಕೂಡ 2ನೇ ಆವೃತ್ತಿಯಲ್ಲಿ ಉಳಿದುಕೊಂಡಿರುವ ಮುದ್ರಣ ದೋಷ ನಿವಾರಣೆ, ಪುನರುಕ್ತಿ ನಿವಾರಣೆ, ಕೃತಕ ವಚನ ನಿವಾರಣೆ ಮಾಡುವ ಮೂಲಕ ಹೊಸ ವಚನಗಳ ಸೇರ್ಪಡೆ, ಪಾಠ ಪರಿಷ್ಕರಣೆ ಇತ್ಯಾದಿ ಕೆಲಸಗಳನ್ನು ಶ್ರಮ ಶ್ರದ್ಧೆಯಿಂದ ಪೂರೈಸಿದ್ದೇವೆ. ಹಾಗೆಯೇ ಮುಂದುವರಿದು "ಯಾರೇ ಮಾಡಿದರು ವಚನ ಪರಿಷ್ಕರಣವೆನ್ನುವುದು ಅಲ್ಪವಿರಾಮ, ಅರ್ಧವಿರಾಮಗಳ ಮೂಲಕ ಪೂರ್ಣವಿರಾಮದ ಕಡೆಗೆ ಸಾಗುವ ಕ್ರಿಯೆಯಾಗಿದೆ' ಎಂಬ ಸತ್ಯವನ್ನು ಸಹೃದಯರು ಅರ್ಥ ಮಾಡಿಕೊಳ್ಳಬೇಕೆಂದು ಕೋರುತ್ತೇವೆ" ಎಂದು ಬಿನ್ನವಿಸಿ ಕೊಂಡಿದ್ದಾರೆ.

ಸಮಗ್ರ ವಚನ ಸಂಪುಟವನ್ನು ಸಂಕೀರ್ಣ ವಚನ ಸಂಪುಟ ಒಂದು ಎಂದು ಕರೆದಿರುವುದಕ್ಕೆ ಕಾರಣಗಳು ಸಷ್ಟವಾಗಿಯೇ ಇವೆ. ವಚನ ಪರಿಭಾಷಾಕೋಶವನ್ನು ಒಳಗೊಂಡಂತೆ 15 ಸಂಪುಟಗಳ ವ್ಯಾಪ್ತಿಯಲ್ಲಿ ವಿಸ್ತಾರ ಪಡೆದಿರುವ

ಸಮಗ್ರ ವಚನ ಸಾಹಿತ್ಯದ ಜನಪ್ರಿಯ ಆವೃತ್ತಿಗಳ ಮೊದಲ 4 ಸಂಪುಟಗಳು ಬಸವಣ್ಣ, ಅಲ್ಲಮ, ಚೆನ್ನಬಸವಣ್ಣ, ಸಿದ್ಧರಾಮೇಶ್ವರರ ವಚನಗಳಿಗೆ ಸಂಬಂಧಿಸಿವೆ. ಈ ಮಹನೀಯರ ವಚನಗಳು ಹೆಚ್ಚು ಸಂಖ್ಯೆಯಲ್ಲಿ ರಚನೆಯಾಗಿದ್ದು, ಸಂಪುಟ ಸ್ವರೂಪವನ್ನು ಪಡೆದುಕೊಂಡಿದೆ. ಆದರೆ ಶಿವಶರಣೆಯರ ವಚನಗಳಾಗಲಿ, ಇತರೆ ಶರಣರ ವಚನಗಳಾಗಲಿ ಸಂಪುಟವಾಗುವಷ್ಟು ಹೆಚ್ಚಿನ ವಚನಗಳು ರಚನೆಯಾಗದ ಕಾರಣ 24 ವಚನಕಾರರನ್ನು ಕೂಡಿಸಿ 1 ಸಂಪುಟವನ್ನು ಸಿದ್ಧಪಡಿಸಲಾಗಿದೆ. ಹೀಗಾಗಿ ಸಂಕೀರ್ಣ ವಚನ ಸಂಪುಟಗಳ 9 ಕೃತಿಗಳಾಗಿ ಈ ಯೋಜನೆಯಲ್ಲಿ ಆಕಾರ ಪಡೆದಿವೆ. ಹೀಗೆ ಸಂಕೀರ್ಣ ವಚನ ಸಂಪುಟ 1 ರ ಸಂಪಾದಕರಾಗಿ ಎಂ.ಎಂ.ಕಲಬುರ್ಗಿ ಅವರು ಮುಂದಿನ ಸಂಪುಟಗಳಲ್ಲಿ ಮಾರ್ಗಸೂಚಿಯನ್ನು ನೀಡಿದ್ದಾರೆ ಎನಿಸುತ್ತದೆ. ಅವರೇ ಹೇಳುವಂತೆ ಸಮಗ್ರ ವಚನ ಸಾಹಿತ್ಯದ ಪ್ರಕಟಣ ಯೋಜನೆ ಒಂದು ಕೃತಿಯ ಪ್ರಕಟಣೆಯಲ್ಲಿ 800 ವರ್ಷ ಕಾಲ ವ್ಯಾಪ್ತಿಯ ಒಂದು ಸಾಹಿತ್ಯ ಪ್ರಕಾರದ ಪ್ರಕಟಣೆಯಾಗಿದೆ. ಪ್ರಕಟವಾಗಿ ಹತ್ತು ಕಡೆ ಹಂಚಿಹೋದ, ಅಪ್ರಕಟಿತ ಸ್ಥಿತಿಯಲ್ಲಿ ಉಳಿದ, ಪಾಠಾಂತರ, ಪಕ್ಷಿಪ್ತತೆಗಳ ದಾಳಿಗೆ ಗುರಿಯಾಗುತ್ತಲೂ ಬಂದ ಈ ಸಾಹಿತ್ಯವನ್ನು ಸಂಗ್ರಹಿಸುವುದು, ಸಂಸ್ಕರಿಸುವುದು, ಸಂಯೋಜಿಸುವುದು ಶ್ರಮ ಶ್ರದ್ಧೆಗಳ ಕೆಲಸವಾಗಿದೆ. ಹೀಗಾಗಿ ಈ ಯೋಜನೆಗೆ ವಚನ ಸಾಹಿತ್ಯದ ಪ್ರಕಟಣ ಇತಿಹಾಸಕ್ಕೆ ಒಂದು ಐತಿಹಾಸಿಕ ಮಹತ್ವ ಸಲ್ಲುತ್ತದೆ.

ಪರಾಮರ್ಶನ ಗ್ರಂಥಗಳು

- ಕಲಬುರ್ಗಿ, ಎಂ.ಎಂ. (1993). *ಬಸವಣ್ಣನವರ ವಚನಗಳು.* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
- ಕಲಬುರ್ಗಿ, ಎಂ.ಎಂ. (1993). *ಸಂಕೀರ್ಣ ವಚನ ಸಂಪುಟ–1.* ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.
- ಕಲಬುರ್ಗಿ, ಎಂ.ಎಂ. (1998). *ಸಿದ್ದರಾಮಯ್ಯ ದೇವರ ವಚನಗಳು.* ಕನ್ನಡ ಸಾಹಿತ್ಯ ಪರಿಷತ್ತು.
- ಕಲಬುರ್ಗಿ, ಎಂ.ಎಂ. (2010). *ಮಾರ್ಗ ಸಂಪುಟ–1,2,3,4.* ಸಪ್ನ ಬುಕ್ ಹೌಸ್.